**ದಿನಾಂಕ: 16-01-2021 ರಂದು ಸಮಯ 11.00 ಗಂಟೆಗೆ ವಾರ್ಡ್ ಸಂಖ್ಯೆ: 156 ಶ್ರೀನಗರಕ್ಕೆ ಸಂಬಂಧಪಟ್ಟಂತೆ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಶ್ರೀ ಸಂದೀಪ ಬಿ.ಸಿ (ಸ.ಕಾ.ನಿ.ಅ ಗಿರಿನಗರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀಮತಿ. ಶಿಲ್ಪಶ್ರೀ. ಬಿ.ಜೆ. ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಕವಿತಾ (ಹಿ.ಆ.ಪ) – ಸದಸ್ಯರು
4. ಶ್ರೀಮತಿ. ಲಾವಣ್ಯ (ಕಿ.ಆ.ಪ) – ಸದಸ್ಯರು
5. ಶ್ರೀ ಯೋಗೇಶ್ (ಕಂ.ವ.)– ಸದಸ್ಯರು
6. ಶ್ರೀ ಕೃಷ್ಣ (ಬೀದಿ ದೀಪ) – ಸದಸ್ಯರು
7. ಶ್ರೀ. ಭರತ್, ಎ.ಸಿ.ಪಿ, ಸಂಚಾರಿ ವಿಭಾಗ
8. ಶ್ರೀ. ವೆಂಕಟೇಶ್, ಠಾಣಾಧಿಕಾರಿಗಳು, ಸಂಚಾರಿ ವಿಭಾಗ
9. ಶ್ರೀ. ರವಿ, ಠಾಣಾಧಿಕಾರಿಗಳು, ಕಾನೂನು ಸುವ್ಯವಸ್ಥೆ, ಹನುಮಂತನಗರ
10. ಶ್ರೀ. ಜಗದೀಶ್
11. ಶ್ರೀ. ಧನಂಜಯ
12. ಶ್ರೀಮತಿ. ಜಯಮ್ಮ

1) <u>BWSSB ಇಲಾಖೆಗೆ ಸಂಬಂಧಪಟ್ಟ ವಿಷಯಗಳು:</u>

ಕಳೆದ ವಾರ್ಡ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ BWSSB ಇಲಾಖೆ ವತಿಯಿಂದ ಒಳಚರಂಡಿ ಗಾಗಿ ಅಗೆದಿರುವ ರಸ್ತೆಯಭಾಗದಲ್ಲಿ Restoration ಕಾಮಗಾರಿಯನ್ನು ಮಾಡಿ ಮುಗಿಸಿರುತ್ತಾರೆ.

2) <u>ಕಾಮಗಾರಿ ಇಲಾಖೆ:</u>

13ನೇ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರು/ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ಅನುಪಯುಕ್ತ ವಸ್ತುಗಳನ್ನು ಹಾಕಿರುತ್ತಾರೆ ಈ ಸಂಬಂಧ ಸಂಬಂಧಪಟ್ಟವರಿಗೆ ನೋಟಿಸನ್ನು ನೀಡಿ ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನೀಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ರವರು ತಿಳಿಸಿದರು.

ಕಾಳಿದಾಸ ಬಡಾವಣೆ ಮುಖ್ಯ ರಸ್ತೆಯಲ್ಲಿ ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ವ್ಯಾಪಾರದ ವಸ್ತುಗಳನ್ನು ಇಟ್ಟಿರುವುದನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನೀಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಶ್ರೀನಗರ ರವರು ತಿಳಿಸಿದರು.

3) <u>ಬೀದಿ ದೀಪ ನಿರ್ವಹಣೆ ಕುರಿತು</u>

ಶ್ರೀನಗರ ಉದ್ಯಾನವನದಲ್ಲಿ ಕೆಲವುಕಡೆ ವಿದ್ಯುತ್ ದೀಪ ಉರಿಯುತ್ತಿಲ್ಲ ವೆಂದು ಹಾಗೂ ಇದನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನೀಕರು ಕೋರಿದರು.

ಶ್ರೀನಗರ ಉದ್ಯಾನವನದಲ್ಲಿ ವಿದ್ಯುತ್ ದೀಪ ಸರಿಪಡಿಸಲು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ. ರವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿದರು.

4) <u>COVID-19 ಕಾಯಿಲೆ ಕುರಿತು</u>

COVID-19 ಕಾಯಿಲೆ ಕುರಿತು COWIN-19 ಲಸಿಕೆಯನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡಿನ ನಾಗರೀಕರಿಗೆ ಸದರಿ ಲಸಿಕೆಯ ಕುರಿತು ಜಾಗ್ರತೆ ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಮಾಸ್ಕನ್ನು ಧರಿಸುವುದರಬಗ್ಗೆ ಸಾರ್ವಜನೀಕರಲ್ಲಿ ಜಾಗ್ರತೆ ಮೂಡಿಸಲು ಕ್ರಮಕೈಗೊಳ್ಳಲು ನೋಡಲ್‌ಅಧಿಕಾರಿಗಳು ಸೂಚಿಸಿದರು.

5) <u>ಕಂದಾಯ ಇಲಾಖೆ:</u>

ಶ್ರೀನಗರ ವಾರ್ಡ್‌ನಲ್ಲಿ ಬಿಬಿಎಂಪಿಯ ಹಿತದೃಷ್ಟಿಯಿಂದ ನಿಗಧಿತ ಸಮಯದಲ್ಲಿ ಕಂದಾಯ ವಸೂಲಿಮಾಡಲು ಕ್ರಮಕೈಗೊಳ್ಳಲು ಹಾಜರಿದ್ದ ಕಂದಾಯ ಅಧಿಕಾರಿಯವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/1/2021
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ ಸಂಖ್ಯೆ-156 ಶ್ರೀನಗರ

21/01/21
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೊಡಲ್ ಅಧಿಕಾರಿಗಳು
ವಾರ್ಡ ಸಂಖ್ಯೆ-156 ಶ್ರೀನಗರ

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ.